FAX : 080-22945102
Phone : 22945107
Website: www.bwssb.gov.in

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560009.

ಸಂಖ್ಯೆ: ಬೆಂಜಮಂ ]ಮುಆಅ–ಕಾ/14–11–2017/ 2063 /2017–18
No : BWSSB

ದಿನಾಂಕ: 08.08.17
Date:

## ಅಧಿಸೂಚನೆ

**ವಿಷಯ:** ಯೂನಿಯನ್ ಆಫ್ ಇಂಡಿಯಾ ಮತ್ತು ಇತರರ ವಿರುದ್ಧ ಬಿ.ಕೆ.ಪವಿತ್ರ ಮತ್ತು ಇತರರು ದಾಖಲಿಸಿದ್ದ ಸಿವಿಲ್ ಅಪಿಲ್ ಸಂಖ್ಯೆ:2358/2011 ಮತ್ತು ಸಂಬಂಧಪಟ್ಟ ಸಿವಿಲ್ ಮೇಲ್ಮನವಿಗಳ ಸಂಬಂಧದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ: 09.02.2017 ರಂದು ನೀಡಿರುವ ತೀರ್ಪಿನನ್ವಯ ಹಿರಿಯ ದೂರವಾಣಿ ಪರಿಚಾರಕ ವೃಂದದ ಕ್ರೋಢೀಕೃತ ತಾತ್ಕಾಲಿಕ ವರಿಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 182 ಎಸ್‌ಆರ್‌ಆರ್ 2011 ದಿನಾಂಕ: 06.05.2017ರಲ್ಲಿ ನೀಡಿರುವ ಮಾರ್ಗಸೂಚಿಗಳು.
2. ಮುಂಬಡ್ತಿ ಆದೇಶ ಸಂ: ಬೆಂಜಮಂ/ಮುಆಅ–ಕಾ/ಸಿಗು–09/3481/2013–14 ದಿ: 10.12.2013
3. ದಿ: 01.04.2014 ರಲ್ಲಿರುವಂತೆ ಹಿರಿಯ ದೂರವಾಣಿ ಪರಿಚಾರಕ ವೃಂದದ ವರಿಷ್ಠತಾ ಪಟ್ಟಿ
4. ದಿ: 01.04.2015 ರಲ್ಲಿರುವಂತೆ ಹಿರಿಯ ದೂರವಾಣಿ ಪರಿಚಾರಕ ವೃಂದದ ವರಿಷ್ಠತಾ ಪಟ್ಟಿ
5. ದಿ: 01.04.2016 ರಲ್ಲಿರುವಂತೆ ಹಿರಿಯ ದೂರವಾಣಿ ಪರಿಚಾರಕ ವೃಂದದ ವರಿಷ್ಠತಾ ಪಟ್ಟಿ
6. ಕಛೇರಿ ಟಿಪ್ಪಣಿಗೆ ಮಾನ್ಯ ಅಧ್ಯಕ್ಷರವರು ನೀಡಿರುವ ಅನುಮೋದನೆ ದಿ: 08.08.2017

---**---

ಯೂನಿಯನ್ ಆಫ್ ಇಂಡಿಯಾ ಮತ್ತು ಇತರರ ವಿರುದ್ಧ ಬಿ.ಕೆ.ಪವಿತ್ರ ಮತ್ತು ಇತರರು ದಾಖಲಿಸಿದ್ದ ಸಿವಿಲ್ ಅಪಿಲ್ ಸಂಖ್ಯೆ:2358/2011 ಮತ್ತು ಸಂಬಂಧಪಟ್ಟ ಸಿವಿಲ್ ಮೇಲ್ಮನವಿಗಳ ಸಂಖ್ಯೆ:2369 of 2011, 2370–2373 of 2011, 2374, 2377 of 2011, 2378 of 2011, 2379 of 2011, 4320–4327 of 2011 And 5280–5286 of 2011 ಸಂಬಂಧದಲ್ಲಿ ಗೌರವಾನ್ವಿತ ಸರ್ವೋಚ್ಛನ್ಯಾಯಾಲಯವು ದಿನಾಂಕ: 09.02.2017ರಂದು ನೀಡಿರುವ ತೀರ್ಪಿನಲ್ಲಿ Karnataka Determination of Seniority of the Government Servants Promoted on the basis of Reservation(to the posts in the civil services of State) Act, 2002ರ ಸೆಕ್ಷನ್

3 ಮತ್ತು 4ನ್ನು "ultra vires Articles 14 and 16 of the Constitution" ಎಂದು ಪರಿಗಣಿಸಿ ನೀಡಿರುವ ಆದೇಶದ ಮುಖ್ಯ ಉದ್ಧೃತ ಭಾಗವನ್ನು ಈ ಮುಂದಿನಂತೆ ನಮೂದಿಸಿಲಾಗಿದೆ.

"In view of the above, we allow these appeals, set aside the impugned judgement and declare the provisions of the impugned Act to the extent of doing away with the 'catch up' rule and providing for consequential seniority under Section 3 and persons belonging to SCs and STs on promotion against roster points to be ultra vires Article 14 and 16 of the Constitution. The Judgement will not affect those who have already retired and will not affect financial benefits already taken. Consequential promotions granted to serving employees, based on consequential seniority benefit, will be treated as ad hoc and liable to be reviewed. Seniority list may be now revised in the light of this judgment within three months from today. Further consequential action may be taken accordingly within next three months"

ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಕುರಿತು ಸರ್ಕಾರವು ಉಲ್ಲೇಖ(1)ರಲ್ಲಿ ತಿಳಿಸಿರುವ ಆದೇಶದಲ್ಲಿ ನೀಡಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ದಿನಾಂಕ: 27.04.1978 ರ ನಂತರದಿಂದ ಹೊರಡಿಸಿರುವ ವರಿಷ್ಠತಾ ಪಟ್ಟಿಗಳನ್ನು ಪರಿಷ್ಕರಿಸಿ ಪ್ರಕಟಿಸಲು ಆದೇಶಿಸಿರುತ್ತದೆ.

ಮಂಡಳಿಯ ವೃಂದ, ನೇಮಕಾತಿ ಮತ್ತು ಬಡ್ತಿ ನಿಬಂಧನೆಗಳು 1981 ಮತ್ತು ಸದರಿ ನಿಬಂಧನೆಗಳ ಷೆಡ್ಯೂಲ್-2 ಕ್ಕೆ ಸಂಬಂಧಿಸಿದಂತೆ 2004 ಹಾಗೂ 2016 ರಲ್ಲಿ ಮಾಡಲಾಗಿರುವ ತಿದ್ದುಪಡಿ ನಿಯಮಗಳ ಪ್ರಕಾರ ಪ್ರಸ್ತುತ ಹಿರಿಯ ದೂರವಾಣಿ ಪರಿಚಾರಕ ಹುದ್ದೆಯು ಶೇಕಡಾ 100 ರಷ್ಟು ಮುಂಬಡ್ತಿ ಮೂಲಕ ಭರ್ತಿ ಮಾಡುವ ಹುದ್ದೆಯಾಗಿರುತ್ತದೆ. ವರಿಷ್ಠತಾ ಪಟ್ಟಿಗಳ ಪರಿಷ್ಕರಣೆಗೆ ಸಂಬಂಧಿಸಿದಂತೆ ಉಲ್ಲೇಖ(1) ರಲ್ಲಿನ ಮಾರ್ಗಸೂಚಿಗಳ ಅನುಸಾರ ಹಿರಿಯ ದೂರವಾಣಿ ಪರಿಚಾರಕ ವೃಂದದಲ್ಲಿ ಹೊರಡಿಸಲಾಗಿರುವ ವರಿಷ್ಠತಾ ಪಟ್ಟಿಗಳನ್ನು ಪರಿಶೀಲಿಸಲಾಗಿ, ಹಿರಿಯ ದೂರವಾಣಿ ಪರಿಚಾರಕ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಜೇಷ್ಠತೆಯಲ್ಲಿ ಯಾವುದೇ ಪರಿಷ್ಕರಣೆ ಇರುವುದಿಲ್ಲ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ದಿನಾಂಕ: 27.04.1978 ರ ನಂತರದಿಂದ ಈವರೆವಿಗೂ ಪ್ರಕಟಿಸಲಾಗಿರುವ ಹಿರಿಯ ದೂರವಾಣಿ ಪರಿಚಾರಕ ವೃಂದದ ವರಿಷ್ಠತಾ ಪಟ್ಟಿಗಳನ್ನು (ಮೇಲಿನ ಉಲ್ಲೇಖಗಳಲ್ಲಿ ತಿಳಿಸಿರುವಂತೆ ಲಭ್ಯವಿರುವ ವರಿಷ್ಟತಾ ಪಟ್ಟಿಗಳು) ಹಾಗೂ ದಿ: 01.04.2017 ರಲ್ಲಿರುವಂತೆ ಪ್ರಕಟಿಸಬೇಕಾಗಿದ್ದ ವರಿಷ್ಠತಾ ಪಟ್ಟಿಯನ್ನು ಕ್ರೋಢಿಕರಿಸಿ ಸಿದ್ದಪಡಿಸಿರುವ ತಾತ್ಕಾಲಿಕ ವರಿಷ್ಠತಾ ಪಟ್ಟಿಯನ್ನು ಈ ಅಧಿಸೂಚನೆಯೊಂದಿಗೆ ಅಡಕಗೊಳಿಸಿ ಸಂಬಂಧಪಟ್ಟವರೆಲ್ಲರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

ಹಿರಿಯ ದೂರವಾಣಿ ಪರಿಚಾರಕ ವೃಂದದ ಕ್ರೋಢಿಕೃತ ತಾತ್ಕಾಲಿಕ ವರಿಷ್ಠತಾ ಪಟ್ಟಿಯ ಕುರಿತು ಆಕ್ಷೇಪಣೆ/ಸಲಹೆಗಳಿದ್ದಲ್ಲಿ, ಈ ತಾತ್ಕಾಲಿಕ ವರಿಷ್ಟತಾ ಪಟ್ಟಿಯನ್ನು ಪ್ರಕಟಿಸಿದ ದಿನಾಂಕದಿಂದ 30 ದಿನಗಳ ಅವಧಿಯೊಳಗಾಗಿ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಬಹುದಾಗಿರುತ್ತದೆ. ನಿಗದಿತ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಲಗತ್ತು: ಕ್ರೋಢಿಕೃತ ತಾತ್ಕಾಲಿಕ ವರಿಷ್ಠತಾ ಪಟ್ಟಿ.

ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ,
ಬೆಂಗಳೂರು ಜಲಮಂಡಳಿ.

08/08/17 8/8/17

ಪ್ರತಿಗಳು:

1) ಮಾನ್ಯ ಅಧ್ಯಕ್ಷರ ಘನ ಅವಗಾಹನೆಗಾಗಿ ಸಲ್ಲಿಸಲಾಗಿದೆ.
2) ಪ್ರಧಾನ ಅಭಿಯಂತರರು/ಎಲ್ಲಾ ಮು.ಅ/ಅ.ಮು.ಅ ರವರ ಗಮನಕ್ಕಾಗಿ.
3) ಆ.ಸ–ಮುಲೆಅ/ಸಿನಿ/ಆ.ಅ./ಸಾ.ಸಂ.ಅ/ಸ.ಸಿ.ವ್ಯ ರವರ ಗಮನಕ್ಕಾಗಿ.
4) ಸನಿ(ಲೆಕ್ಕ)/ಎಲ್ಲ ಲೆ.ಅ ರವರ ಗಮನಕ್ಕಾಗಿ ಹಾಗೂ ಸಂಬಂಧಪಟ್ಟವರ ಮಾಹಿತಿಗೆ ತರುವಂತೆ ಸೂಚಿಸಲಾಗಿದೆ.
5) ಎಲ್ಲಾ ಕಾನಿಅ/ಸಕಾನಿಅ ರವರ ಗಮನಕ್ಕಾಗಿ ಮತ್ತು ಸಂಬಂಧಪಟ್ಟವರ ಮಾಹಿತಿಗೆ ತರುವಂತೆ ಸೂಚಿಸಲಾಗಿದೆ.
6) ಹಿ.ವ್ಯ–1,/ಸಿಗು–1/ಗಣಕೀಕರಣ ಶಾಖೆ ಅಧ್ಯಕ್ಷರ ಕಚೇರಿ ಇವರ ಮಾಹಿತಿಗಾಗಿ.
7) ಅಧ್ಯಕ್ಷರು/ಪ್ರಧಾನ ಕಾರ್ಯದರ್ಶಿ ಬೆಂಜಮಂ ನೌಕರರ ಸಂಘ/ಬೆಂಜಮಂ ಅಭಿಯಂತರರ ಸಂಘ/ಪ.ಜಾ, ಪ.ಪಂ, ಅಭಿಯಂತರರ ಕ್ಷೇಮಾಭಿವೃದ್ಧಿ ಸಂಘ/ಸ್ಯಾನಿಟರಿ ವರ್ಕರ್ಸ್ ಯೂನಿಯನ್/ಪ.ಜಾ. ಪ.ಪಂ. ನೌಕರರ ಕ್ಷೇಮಾಭಿವೃದ್ಧಿ ಸಂಘ ರವರ ಮಾಹಿತಿಗಾಗಿ.
8) ಪ್ರಕಟಣಾ ಫಲಕಕ್ಕೆ.

**ಯೂನಿಯನ್ ಆಫ್ ಇಂಡಿಯಾ ಮತ್ತು ಇತರರ ವಿರುದ್ಧ ಬಿ.ಕೆ.ಪವಿತ್ರ ಮತ್ತು ಇತರರು ದಾಖಲಿಸಿದ್ದ ಸಿವಿಲ್ ಅಪಿಲ್ ಸಂಖ್ಯೆ:2358/2011 ಮತ್ತು ಸಂಬಂಧಪಟ್ಟ ಸಿವಿಲ್ ಮೇಲ್ಮನವಿಗಳ ಸಂಬಂಧದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ: 09.02.2017 ರಂದು ನೀಡಿರುವ ತೀರ್ಪಿನನ್ವಯ ಹಿರಿಯ ದೂರವಾಣಿ ಪರಿಚಾರಕ ವೃಂದದ ಕ್ರೋಢೀಕೃತ ತಾತ್ಕಾಲಿಕ ವರಿಷ್ಠತಾ ಪಟ್ಟಿ.**

| ಕ್ರ.ಸಂ | ಹೆಸರು | ಜನ್ಮ ದಿನಾಂಕ | ಹಾಲಿ ಹುದ್ದೆಗೆ ಬಡ್ತಿ ಹೊಂದಿದ ದಿನಾಂಕ | ಪರಿಭಾವಿತ ಮುಂಬಡ್ತಿ ದಿನಾಂಕ |
|---|---|---|---|---|
| 1 | ಕೆ. ಮಲ್ಲಿಕಾರ್ಜುನ | 01.06.56 | 10.12.2013 | 10.12.2013 |
| 2 | ಸ್ಯೆಯದ್ ಖದೀರ್ ಅಹಮದ್ | 20.05.62 | 10.12.2013 | 10.12.2013 |

**ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ,**
**ಬೆಂಗಳೂರು ಜಲಮಂಡಳಿ.**

08/08/17 8/8/17